ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ತಂತ್ರಜ್ಞಾನ, ಪರಿಸರ ಮತ್ತು ಅಸಂಪ್ರಾದಾಯಿಕ ಇಂಧನ ಇಲಾಖಾ ರಾಜ್ಯ ಸಚಿವರು) :- ಸನ್ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆಯ ಬಗ್ಗೆ ಪಲ್ಯೂಷನ್ ಕಂಟ್ರೋಲ್ ಬೋರ್ಡಿನವರು ಹೋಗಿ ವಿಚಾರ ಮಾಡಿಕೊಂಡಿದ್ದಾರೆ. ಆನಂತರ, ಪೊಲೂಷನ್ ಕಂಟ್ರೋಲ್ ಬೋರ್ಡಿನವರು ಹೇಳಿದ ನಂತರ 10-15 ಹೊಂಡಗಳನ್ನು ಮಾಡಿ ಮೊಲಾಸಿಸ್ ಆರ್. ಎಸ್. ಆದ ನಂತರ ಏನು ಬರುತ್ತಿತ್ತು, ಆರ್. ಎಸ್. ತಯಾರಾದ ನಂತರ ಏನು ಹೋಗುತ್ತಿತ್ತು, ಅದನ್ನು ಹೋಗದ ಹಾಗೆ ಆದಷ್ಟು ವ್ಯವಸ್ಥೆ ಮಾಡಿದ್ದಾರೆ. ಆದರೂ ಸಹ ಮೊನ್ನೆ ಮಳೆ ಬಂದಿದ್ದರಿಂದ ಆ ಹೊಂಡಗಳು ತುಂಬಿ ಅದು ಹೋಗಿದ್ದು ನಿಜ. ಆ ಪ್ರಕಾರ ಒಂದು ವರದಿಯನ್ನು ತೆಗೆದುಕೊಂಡು ಬಂದು ಮಾಲೀಕ ವರ್ಗದವರೂ ಕೂಡ ಈಗಾಗಲೇ ಅಲ್ಲಿ ವಿಸಿಟ್ ಮಾಡಿದ್ದಾರೆ. ನಾನು ಮತ್ತು ಚಂದ್ರಕಾಂತ ಬೆಲ್ಲದ್‌ರವರು ಕೂಡ ಮಾತನಾಡಿದ್ದೇವೆ. ಇಬ್ಬರೂ ಹೋಗಿ ಅದನ್ನು ಯಾವ ಪ್ರಕಾರ ಬಗೆಹರಿಸಬೇಕು. ಅಷ್ಟನ್ನು ಮಾಡುತ್ತೇವೆ. ಒಂದು ವೇಳೆ, ಜನಗಳ ಆರೋಗ್ಯ ರೈತರ ಬೆಳೆಗೆ ನಾಶವಾಗುವಂಥ ಯಾವುದೇ ಪರಿಸ್ಥಿತಿ ಉಂಟಾದರೆ, ಸರ್ಕಾರ ಅದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು :- ಇದರಲ್ಲಿ ಚರ್ಚೆಯಿಲ್ಲ. ದಯಮಾಡಿ ಸಹಕರಿಸಬೇಕು. ನಾವು ನಿಯಮಗಳಿಗೆ ಅಂಟಿಕೊಂಡರೆ ಸದನ ಚೆನ್ನಾಗಿ ನಡೆಯುತ್ತದೆ. ಈಗ ಯೋಗೀಶ್ ಭಟ್‌ರವರು, ಎಂ.ಆರ್.ಪಿ.ಎಲ್. ಬಗ್ಗೆ.

(ಉ) ಎಂ.ಆರ್.ಪಿ.ಎಲ್. ಬಗ್ಗೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :- ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಜನತೆಗೆ ಬೃಹತ್ ಉದ್ದಿಮೆಗಳ ಬಗ್ಗೆ ಒಂದು ಮಾಸ್ ಹಿಸ್ಟೀರಿಯಾ ಉಂಟಾಗಿದೆ ಎಂದು ಜಿಲ್ಲಾಧಿಕಾರಿಗಳು ಮತ್ತು ಅಧಿಕಾರಿಗಳು ಮಾತನಾಡಲು ಆರಂಭಿಸಿದ್ದಾರೆ. ಇವತ್ತು ಅಲ್ಲಿ ಆಗಿರುವಂಥ ತೊಂದರೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ, ತರುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಇವತ್ತು ಯೋಚನೆ ಮಾಡಬೇಕಾಗಿದೆ. ಈ ಮಾಸ್ ಹಿಸ್ಟೀರಿಯಾ ಅಧಿಕಾರಿಗಳಿಗೆ ಉಂಟಾಗಿದೆಯೇ? ಸರ್ಕಾರಕ್ಕೆ ಉಂಟಾಗಿದೆಯೇ? ಯಾರಿಗೆ ಉಂಟಾಗಿದೆ ಎನ್ನುವ ಪ್ರಶ್ನೆಯನ್ನು ಜಿಲ್ಲೆಯ ಜನತೆ ಮಾಡುತ್ತಿದ್ದಾರೆ. ತಾವು ದಯವಿಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಜನರನ್ನು ನಿಮ್ಮಧಿಯಿಂದ ತಮ್ಮಷ್ಟಕ್ಕೆ ತಾವು ಬದುಕಲು ಬಿಡಿ ಎಂಬ ಒಂದು ಆಗ್ರಹವನ್ನು ಮಾಡುತ್ತೇನೆ. ಮೊನ್ನೆ ಎಂ.ಆರ್.ಪಿ.ಎಲ್. ಕಾರ್ಖಾನೆಗ 3 ಮಿಲಿಯನ್ ಟನ್‌ನಿಂದ 9 ಮಿಲಿಯನ್ ಟನ್‌ಗೆ ಹೆಚ್ಚಿನ ಉತ್ಪಾದನೆ ಮಾಡಲು ಅವಕಾಶವನ್ನು ಕೊಟ್ಟಿದ್ದಾರೆ, ಎನ್‌ಓಸಿ ಕೊಟ್ಟಿದ್ದಾರೆ ಎನ್ನುವ ಮಾಹಿತಿ ನನ್ನ ಗಮನಕ್ಕೆ ಬಂದಿದೆ. ಈಗಾಗಲೇ 3 ಮಿಲಿಯನ್ ಟನ್ ಇರುವಾಗಲೇ ಒಂದು ಪಂಪು ಹಾಳಾಗಿ ಆಗಿರುವಂಥ ಅನಾಹುತ, ಎಷ್ಟು ಗದ್ದೆಗಳು, ಭತ್ತದ ಭೂಮಿ ಹಾಳಾದದ್ದು, ಅದರಿಂದ ಆಗಿರುವಂಥ ತೊಂದರೆಗಳು ಎಲ್ಲವೂ ಗೊತ್ತಿದ್ದ ಹಿನ್ನೆಲೆಯಲ್ಲಿ ಕೂಡ 9 ಮಿಲಿಯನ್ ಟನ್ ಉತ್ಪಾದನೆಗೆ ಅವಕಾಶವನ್ನು

ಕೊಟ್ಟಿದ್ದಾರೆ. ಈ ಹಿನ್ನಲೆಯಲ್ಲಿ ಬರುವಂಥ ಆಕ್ಷೇಪಣೆಗಳು ಎಂದರೆ ಎನ್.ಓ.ಸಿ.ಕೊಡುವುದರ ಮೊದಲು ಟೆಕ್ನಿಕಲ್ ಅಡ್ವಿಸರಿ ಕಮಿಟಿ ಮುಂದೆ ಈ ವಿಷಯವನ್ನು ತರಬೇಕು. ಇದರ ಬಗ್ಗೆ ಚರ್ಚೆಯಾಗಬೇಕು. ಆದರೆ ಟೆಕ್ನಿಕಲ್ ಅಡ್ವೈಸರಿ ಕಮಿಟಿ ಮೀಟಿಂಗಿನ ಅಜೆಂಡಾದಲ್ಲಿ ಈ ವಿಚಾರವನ್ನು ತರದೇ ಎನ್.ಓ.ಸಿ. ಕೊಟ್ಟಿದ್ದಾರೆ ಎಂದು ರೆಕಾರ್ಡ್ ಆಗಿದೆ. ಅದರ ಜೊತೆಯಲ್ಲಿ ಎನ್.ಓ.ಸಿ. ಕೊಡುವ ವಿಚಾರವನ್ನು ಪರಿಸರ ನಿಯಂತ್ರಣ ಮಂಡಳಿಯ ಸಭೆಯಲ್ಲಿ ಇಟ್ಟು ಚರ್ಚೆ ಮಾಡಿಲ್ಲ. ತಮಗೆ ಬೇಕಾದ ರೀತಿಯಲ್ಲಿ ಎನ್.ಓ.ಸಿ.ಯನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು :- ದಯಮಾಡಿ ಸರ್ಕಾರದ ಪರವಾಗಿ ಯಾರಾದರೂ ಅವರು ಹೇಳುತ್ತಿರುವುದನ್ನು ಕೇಳಿಸಿಕೊಳ್ಳಿ. ಅವರು ಬಹಳ ಗಂಭೀರವಾದ ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆ. Zero hour, ಆನ್ನೂ I must close it. ತಾವೆಲ್ಲರೂ ಕೂಡ ಪರಸ್ಪರ ಚರ್ಚೆಯಲ್ಲಿ ನಿರತರಾಗಿದ್ದೀರಿ.

ಶ್ರೀ ಎನ್. ಯೋಗೀಶ್ ಭಟ್ :- ಎನ್.ಓ.ಸಿ. ಕೊಡುವ ಮೊದಲು ಪಬ್ಲಿಕ್ ಹಿಯರಿಂಗ್ ಮಾಡಬೇಕಾಗಿತ್ತು. ಜಿಲ್ಲೆಯ ಶಾಸಕರನ್ನು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನು, ಗಣ್ಯರನ್ನು ಪರಿಸರವಾದಿಗಳನ್ನು ಕರೆಸಾದರೂ ಕೇಳುವಂಥ ಕನಿಷ್ಟ ಅಧಿಕಾರಿಗಳನ್ನಾದರೂ ಕರೆಸಿ ವಿಚಾರ ವಿನಿಮಯ ಮಾಡುವಂಥ ಅನಿವಾರ್ಯತೆ ಇತ್ತು. ಆದನ್ನೂ ಕೂಡ ಮಾಡಿಲ್ಲ. ಯಾವುದನ್ನೂ ಹೇಳದೇ ಪರಿಸರ ಮಂಡಳಿಯ ಅಧ್ಯಕ್ಷರು ಅದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಇನ್ನೊಂದು ವಿಷಯವೆಂದರೆ 3 ಮಿಲಿಯನ್ ಟನ್‌ನಿಂದ 9 ಮಿಲಿಯನ್ ಟನ್ನಿಗೆ ಏರಿಸಿರುವುದರಿಂದ ಟ್ರಯಲ್ ರನ್‌ನಲ್ಲಿ ಆಗಿರುವಂಥ ತೊಂದರೆ, ತ್ಯಾಜ್ಯವಸ್ತುಗಳ ಕೊಳವೆ ಒಡೆದು ರೈತರಿಗೆ ತೊಂದರೆಯಾಗಿದೆ ಮತ್ತು 9 ಮಿಲಿಯನ್ ಟನ್ ಹೊರಹಾಕುವ ಬಿಸಿ ತ್ಯಾಜ್ಯ ವಸ್ತುಗಳಿಂದ ಜಲಚರಗಳು ನಾಶವಾಗುತ್ತಿವೆ. ಅಲ್ಲದೆ ತ್ಯಾಜ್ಯ ವಸ್ತುಗಳನ್ನು ಜಮೀನಿನಲ್ಲಿ ಬಿಟ್ಟಾಗ ಸುತ್ತಮುತ್ತಲಿನ ಗ್ರಾಮಗಳ ರೈತರ ಕುಡಿಯುವ ನೀರೂ ಸಹ ಆಮ್ಲಯುಕ್ತ ಆಗುವುದಲ್ಲದೆ, ಅಂತರ್ ಜಲದಲ್ಲೂ ಸಹ ಈ ಕಲುಷಿತ ನೀರು ಹೋಗಿ ರೈತರ ಕೊಳವೆ ಬಾವಿಗಳು, ಕುಡಿಯುವ ನೀರಿನ ಬಾವಿಗಳಿಗೂ ಸಹ ತೊಂದರೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂಬ ಆಕ್ಷೇಪಣೆ ಕೂಡ ಈ ಸಂದರ್ಭದಲ್ಲಿ ಉಲ್ಲೇಖಿತವಾಗಿದೆ. ಅಷ್ಟು ಮಾತ್ರವಲ್ಲ, ಮಂಡಳಿ ಕೊಟ್ಟಿರುವ ಆರ್ಡರ್ ಯಾವುದಿದೆ, ಅದು ಪ್ರೋವಿಷನಲ್ ಆರ್ಡರ್ ಎಂದು ಹೇಳುತ್ತಿದ್ದಾರೆ. ಆದರೆ ಈ ಪ್ರೋವಿಷನಲ್ ಆರ್ಡರ್ ಕೂಡ ಖಾಯಂ ಆಗುವಂಥ ಸಾಧ್ಯತೆಗಳು ಹೆಚ್ಚಿನ ಮಟ್ಟದಲ್ಲಿವೆ. ಈ ರೀತಿ ಎಂ.ಆರ್.ಎಲ್. ಸಂಸ್ಥೆಗೆ low sulphur Fuel grade oil ಅನ್ನು ಉಪಯೋಗಿಸಿ ಒಂದು ಸಾವಿರ ಮೆಗಾವ್ಯಾಟ್, oil-based ಒಂದು ಪವರ್ ಪ್ರಾಜೆಕ್ಟ್ ಹಾಕುವುದಕ್ಕೂ ಅನುಮತಿಯನ್ನು ಕೊಟ್ಟಿದ್ದಾರೆ. ಇಲ್ಲಿ ಬಂದಿರುವಂಥ ತೊಂದರೆ ಈಗಾಗಲೇ sea barge mounted ಮೂಲಕ 1,000 ಮೆಗಾವ್ಯಾಟ್, ಕೋಜೆಂಟ್ರಿಕ್ಸ್ ಮೂಲಕ, ಇನ್ನಿತರ ಮೂಲಕ ಎಂದು ಹೇಳಿ ಇಡೀ ಜಿಲ್ಲೆಯನ್ನು ಉರಿಸಿ ರಾಜ್ಯಕ್ಕೆ ಬೆಳಕನ್ನು ಕೊಡುವಂಥಾದ್ದು ಖಂಡಿತ ಬೇಡ.

ಜಿಲ್ಲೆಯ ಜನತೆಯ ಪರವಾಗಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ, ನಮ್ಮ ಬೇಡಿಕೆ ಅಷ್ಟೇ. ಇದರಲ್ಲಿ ಒತ್ತಾಯ ಮಾಡುವಂಥಾದ್ದು ಇಲ್ಲ. 20 ಕಿ. ಮೀ. ನಗರ ವ್ಯಾಪ್ತಿಯಲ್ಲಿ ಇರತಕ್ಕಂಥಾದ್ದಕ್ಕೆ ಅವಕಾಶ ಕೊಡಬಾರದು ಎನ್ನುವ ಹಿನ್ನೆಲೆಯಲ್ಲಿ ಕೂಡ ಕೊಟ್ಟಿದ್ದಾರೆ. ಅದು ಸರಿಯಲ್ಲ. ಮತ್ತು 9 ಮಿಲಿಯನ್ ಟನ್ನಿಗೆ ಕೊಟ್ಟಿರುವಂಥ ಅನುಮತಿಯನ್ನು ಕೂಡಲೇ ಮಾಪಸ್ಸು ತೆಗೆದುಕೊಳ್ಳಬೇಕು ಎನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಾ, ಇಂಥ ಬೃಹತ್ ಕೈಗಾರಿಕೆಗಳಿಗೆ ಪರಿಸರ ಕ್ಲಿಯರೆನ್ಸ್ ನೀಡಲು ಮುಖ್ಯ ಕಾರ್ಯದರ್ಶಿ ಶ್ರೇಣಿಯ ಅಧಿಕಾರಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಬೇಕೆಂಬ ಎರಡನೇ ಒತ್ತಾಯವನ್ನು ಮಾಡುತ್ತೇನೆ. ಕೊನೆಯದಾಗಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಗೆ ಕ್ಲಿಯರೆನ್ಸ್ ನೀಡಲು ಸ್ವತಂತ್ರ ಅಧಿಕಾರ ನೀಡಬಾರದು ಎಂಬ ಒತ್ತಾಯವನ್ನೂ ಕೂಡ ಸರ್ಕಾರದ ಗಮನಕ್ಕೆ ತಂದು, ದಯವಿಟ್ಟು ದಕ್ಷಿಣ ಕನ್ನಡ ಜಿಲ್ಲೆಯನ್ನು ಉಳಿಸಿ ಎನ್ನುವ ಪುನರಪಿ ಬೇಡಿಕೆಯನ್ನು ನಾನು ಮುಂಡನೆ ಮಾಡಲಿಕ್ಕೆ ಇಚ್ಛಿಸುತ್ತೇನೆ.

ಅಧ್ಯಕ್ಷರು :- ಈಗ ಸಭಾಪತಿಯವರು. ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಸನ್ಮಾನ್ಯ ಸಭಾಧ್ಯಕ್ಷರೇ, ಎಂ.ಆರ್.ಪಿ.ಎಲ್. ಸಂಸ್ಥೆಯ ಒಂದು ದುರಂತ ಏನಿದೆ, ಅದರ ಬಗ್ಗೆ ಇತ್ತೀಚೆಗೆ ನಾವು ಚರ್ಚೆ ಮಾಡಿದ್ದೇವೆ. ಆದರೆ ಮೊನ್ನೆ ನಾವು ಇದರಿಂದ 500 ಎಕರೆ ಭೂಮಿ ನಾಶವಾಗಿದೆ ಎಂದು ಹೇಳಿದಾಗ ಸರ್ಕಾರ 15 ಎಕರೆ ಮಾತ್ರ ನಾಶವಾಗಿದೆ ಎಂದು ವರದಿ ಬಂದಿದೆ ಎಂದು ಹೇಳಿದರು. ಜಾಯಿಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್‌ರವರ ಸರ್ವೆ ಪ್ರಕಾರ, ನಮಗೆ ಬಂದ ಮಾಹಿತಿ ಪ್ರಕಾರ ಸುಮಾರು 200 ಎಕರೆಗೂ ಹೆಚ್ಚಿನ ಭೂಮಿ ಸರ್ವೆ ಪ್ರಕಾರವೇ ಬಂದಿದೆ ಎಂದು ಮೊನ್ನೆ ತಾನೇ ಉಸ್ತುವಾರಿ ಸಚಿವರು ಕೂಡ ಹೇಳಿದರು. ಏತನ್ಮಧ್ಯದಲ್ಲಿ 3 ಮಿಲಿಯನ್ ಟನ್ನಿಗೆ ಉತ್ಪಾದನೆಗೆ ಅವರಿಗೆ ಪರವಾನಗಿ ಕೊಟ್ಟಿದ್ದರು. ಅದನ್ನು ಏಕಾಏಕಿ 9 ಮಿಲಿಯನ್ ಟನ್ ಉತ್ಪಾದನೆಗೆ ಪರವಾನಗಿ ಕೊಟ್ಟಂಥ ವಿಚಾರ ಕೇಳಿದಾಗ ಜನರು ಇದರ ಬಗ್ಗೆ ಪ್ರತಿಭಟನೆ ಮಾಡಲಿಕ್ಕೆ ಹೋದರು. ಮೊನ್ನೆ ಇತ್ತೀಚೆಗೆ ಬಂದ ಹೊಸ ಜಿಲ್ಲಾಧಿಕಾರಿಗಳು ಹೇಳುತ್ತಾರೆ, ಅವರಿಗೆಲ್ಲಾ ಮಾಸ್ ಹಿಸ್ಟೀರಿಯಾ ಶುರುವಾಗಿದೆ ಎಂದು ಹೇಳುವಂಥ ಮಾತನ್ನು ಹೇಳುವುದಾದರೆ ಈ ಮಾಸ್ ಹಿಸ್ಟೀರಿಯಾ ಯಾರಿಗೆ ಆಗಿದೆ? ಜನರಿಗೆ ಹಿಸ್ಟೀರಿಯಾ ಶುರುವಾಗಿದೆಯೇ ಅಥವಾ ಸರ್ಕಾರಕ್ಕೆ ಹಿಸ್ಟೀರಿಯಾ ಶುರುವಾಗಿದೆಯೇ ಎನ್ನುವುದನ್ನು ನಾವು ಗಮನಕ್ಕೆ ತರಬೇಕಾಗುತ್ತದೆ. ಅದೇ ರೀತಿ ಈ ಹಿಂದೆ ಒಂದು ದೊಡ್ಡ ಚಳುವಳಿಯಾಗಿ ಜಿಲ್ಲೆಯಾದ್ಯಂತ, ಮೂರು ದಿವಸ ಇಡೀ ಜಿಲ್ಲೆ ರಣರಂಗದ ಹಾಗೆ ಆಗಿತ್ತು.

ಅಧ್ಯಕ್ಷರು :- ಅದರ ಬಗ್ಗೆ ಅನೇಕ ಸಲ ಚರ್ಚೆಯಾಗಿದೆ.

ಶ್ರೀ ಯು. ಆರ್. ಸಭಾಪತಿ :- ದಯವಿಟ್ಟು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಯಾರು ಇದಕ್ಕೆ ಅವಕಾಶ ಒದಗಿಸಿದ್ದಾರೆ, ಇನ್ನಷ್ಟು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ಭೀತಿಗೊಳಿಸಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು :- ನಾನು ಆದಕ್ಕೇ ಹೇಳಿದ್ದುದು, ದಯಮಾಡಿ ಎಲ್ಲರೂ ನಿಯಮಗಳಿಗೆ ಅಂಟಿಕೊಳ್ಳಿ. ಯಾರು ಬಂದು ನನ್ನನ್ನು ಕಂಡು ಅನುಮತಿ ಕೇಳಿರುತ್ತಾರೆ, ಅವರಿಗೆ ಮಾತ್ರ ಅವಕಾಶಕೊಡುತ್ತೇನೆ. ಚರ್ಚೆ ಇರುವುದಿಲ್ಲ. ಸ್ವಲ್ಪ ನಿಯಮಗಳಿಗೆ ಅಂಟಿಕೊಂಡರೆ ಸದನದ ಸಮಯ ಉಳಿಯುತ್ತದೆ, ದಯಮಾಡಿ ಸಹಕರಿಸಬೇಕು. ಯೋಗೀಶ್ ಭಟ್ ಅವರು ಕೆಲವು ವಿಚಾರಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ, ತಾವು ಸರ್ಕಾರದ ವತಿಯಿಂದ ಅದಕ್ಕೆ ಉತ್ತರ ಹೇಳಿ.

12.10

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿ) :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರತಕ್ಕಂಥ ವಿಚಾರ ಎಂದರೆ ಕೊಜೆಂಟ್ರಿಕ್ಸ್ ಬಗ್ಗೆ, ಎಂಆರ್‌ಪಿಎಲ್ ಬಗ್ಗೆ ಆದರಿಂದ ಪರಿಸರದ ಮೇಲೆ ಆಗತಕ್ಕಂಥ ಪರಿಣಾಮ, ರೈತನಿಗೆ ಆಗತಕ್ಕಂಥ ತೊಂದರೆ ಇವುಗಳ ಬಗ್ಗೆ ಈ ಸದನದಲ್ಲಿ ಅನೇಕ ಸಲ ಚರ್ಚೆಯಾಗಿದೆ.

MR. SPEAKER :- He has raised some new issues.

(ಗೊಂದಲ)

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೇ, ಮಾನ್ಯ ಯೋಗೀಶ್ ಭಟ್‌ರವರು ಹೇಳಿದ ವಿಷಯದ ಬಗ್ಗೆ ಪೂರ್ಣ ಮಾಹಿತಿ ಸಿಕ್ಕಿದ ಕೂಡಲೇ ಅದನ್ನು ಪರಿಶೀಲನೆ ಮಾಡಿ ಸಮರ್ಪಕವಾದ ಉತ್ತರನ್ನು ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಈ ಶೂನ್ಯ ವೇಳೆಯಲ್ಲಿ ಸದಸ್ಯರು ಪ್ರಶ್ನೆಗಳನ್ನು ಕೇಳಿದಾಗ ಮಂತ್ರಿಗಳು ಉತ್ತರ ಕೊಡುತ್ತೇವೆ, ವಿವರಣೆ ತರಿಸಿಕೊಂಡು ನಂತರ ಉತ್ತರ ಒದಗಿಸಿಕೊಡುತ್ತೇವೆ ಎಂದು ಪ್ರತಿಯೊಂದಕ್ಕೂ ಹೇಳುತ್ತಿರುತ್ತಾರೆ. ಹೀಗೆ ಏತಕ್ಕೆ ಆಗುತ್ತಿದೆ? ವಿಶೇಷ ಸಂದರ್ಭದಲ್ಲಿ ಈ ರೀತಿ ಆದರೆ ಪರವಾಗಿಲ್ಲ. ನಮ್ಮದೇನೂ ಅಭ್ಯಂತರವಿಲ್ಲ. ಪ್ರಶ್ನೋತ್ತರ ವೇಳೆ ಆದ ತಕ್ಷಣ ಶೂನ್ಯ ವೇಳೆ ಬರುತ್ತದೆ, ಪ್ರಮುಖವಾದಂಥ ವಿಷಯಗಳನ್ನು ನಾವು ಪ್ರಸ್ತಾಪ ಮಾಡುತ್ತೇವೆ, ಅಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಸಚಿವರು ಇದ್ದರೆ ಅವರ ಗಮನಕ್ಕೂ ಇದು ಬರುತ್ತದೆ. ಆದ್ದರಿಂದ ಸಂಬಂಧಪಟ್ಟ ಸಚಿವರು ಸದನದಲ್ಲಿ ಇರಬೇಕೆಂದು ಅನೇಕ ಸಲ ಒತ್ತಾಯ ಮಾಡಿದ್ದೇವೆ. ಸಂಬಂಧಪಟ್ಟಂಥ ಮಂತ್ರಿಗಳು ಉತ್ತರಕೊಡುವಂಥ ಸತ್‌ಸಂಪ್ರದಾಯ ಬರುವುದು ಒಳ್ಳೆಯದು.

ಅಧ್ಯಕ್ಷರು :- ಈ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿತ್ತು. ಅವರಿಗೆ ಆರೋಗ್ಯ ಸರಿಯಿಲ್ಲದೆ ಇರುವುದರಿಂದ ಅವರು ನನ್ನ ಅನುಮತಿಯನ್ನು ಬೆಳಿಗ್ಗೆಯೇ ಕೇಳಿದ್ದಾರೆ. ಮತ್ತು ಎಂ. ಪಿ. ಪ್ರಕಾಶ್ ರವರಿಗೆ ಅವರ ತಾಯಿಯವರು ತೀರಿಕೊಂಡಿರುವುದರಿಂದ ಅಂತ್ಯಕ್ರಿಯೆಯಲ್ಲಿ

ಭಾಗವಹಿಸಬೇಕೆಂದು ಹೋಗಿದ್ದಾರೆ. ಅದೆಲ್ಲಾ ವಿಚಾರಣಾ ನನ್ನ ಗಮನಕ್ಕೆ ಬಂದಿದೆ. ನಿಯಮ 351 ಮತ್ತು ಗಮನಸೆಳೆಯುವ ಸೂಚನೆಯಲ್ಲಿ ನಾರಾಯಣರವರು, ಜಯಚಂದ್ರ ಮುಂತಾದವರು ಪ್ರಶ್ನೆಗಳನ್ನು ಕೇಳಿದ್ದಾರೆ. ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತಿದ್ದೇನೆಂದರೆ ಬೇಡಿಕೆಗಳ ಮೇಲೆ ಚರ್ಚೆಗೆ ನಮಗೆ ಇವತ್ತು ಕಡೆಯ ದಿವಸವಾಗಿದೆ. ಮತ್ತು ಈ ನಿಯಮ 351 ಮತ್ತು ಗಮನ ಸೆಳೆಯುವ ಸೂಚನೆಗಳು ಬಹಳ ಜರೂರಾದ ವಿಷಯವೇನೂ ಅಲ್ಲ. ಅಂದರೆ ಇದೂ ಸಹ ಜರೂರಾದ ವಿಷಯ ಆಗಿದ್ದರೂ ಸಹ ಇವತ್ತೇ ಆರ್ಜೆಂಟಾಗಿ ತೆಗೆದುಕೊಳ್ಳಬೇಕಾದಂಥ ಎಮರ್ಜೆನ್ಸಿ ಇಲ್ಲ. ಈ ವಿಷಯಗಳನ್ನು ಇನ್ನೊಂದು ದಿವಸ ಕಾರ್ಯಕಲಾಪಗಳ ಪಟ್ಟಿಯಲ್ಲಿ ಹಾಕಿಕೊಳ್ಳೋಣ. ತಾವು ದಯವಿಟ್ಟು ಸಹಕರಿಸಿದರೆ ಇನ್ನೂ 4 ಜನ ಸ್ನೇಹಿತರ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಾಗುತ್ತದೆ. ನಾನು ಕಾರ್ಯಕಲಾಪಗಳನ್ನು ನೋಡಿಕೊಂಡು ಹೊಂದಾಣಿಕೆ ಮಾಡಿಕೊಳ್ಳುತ್ತೇನೆ. ತಾವು ದಯವಿಟ್ಟು ಸಹಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೇ, ನಾಳೆ ಅಥವಾ ನಾಡಿದ್ದು ಕಾರ್ಯ ಕಲಾಪಗಳ ಪಟ್ಟಿಯಲ್ಲಿ ನಾವು ಸೂಚನೆ ಕೊಟ್ಟಿರತಕ್ಕಂಥ ವಿಷಯಗಳನ್ನು ಹಾಕುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು :- ಅದನ್ನು ನಾನು ಮಾಡಿಸಿಕೊಡುತ್ತೇನೆ. ಬೇಡಿಕೆಗಳ ಮೇಲೆ ನಾಳೆ ಸರ್ಕಾರದಿಂದ ಉತ್ತರ ಪ್ರಾರಂಭ ಮಾಡಬೇಕಾಗುತ್ತದೆ. ನಿಯಮ 351 ಅನ್ನು ಕೈಬಿಟ್ಟಿದ್ದೇವೆಂದು ಹೇಳಿದ್ದೇನೆ. ಇನ್ನೊಂದು ದಿವಸ ಅದನ್ನು ಇಟ್ಟುಕೊಳ್ಳೋಣ. ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಈ ದಿವಸವೇ ಕೊನೆಯಯ ದಿನವಾಗಿದೆ. ಆದ್ದರಿಂದ ನಿಯಮ 351 ಮತ್ತು ಗಮನ ಸೆಳೆಯುವ ಸೂಚನೆಯನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ. ಇದರಿಂದ ಅಂತಹ ದೊಡ್ಡ ತೊಂದರೆಯೇನೂ ಆಗುವುದಿಲ್ಲ. ನಂತರ ಇವತ್ತು ಸಭೆ ಲಂಚ್ ಬ್ರೇಕ್ ಇಲ್ಲದೆ ನಡೆಯುವುದು. ಲಂಚ್ ಸಮಯದಲ್ಲಿ ಕೋರಂಗೆ ತೊಂದರೆಯಾಗದಂತೆ ಸದಸ್ಯರುಗಳು ತಮ್ಮಲ್ಲಿ ತಾವೇ ಸಹಕರಿಸಿಕೊಂಡು ಹೋಗಿ ಊಟ ಮುಗಿಸಿಕೊಂಡು ಬಂದರೆ ನಾವು ಸ್ವಲ್ಪ ಹೆಚ್ಚು ಸಮಯ ಕುಳಿತು ಇನ್ನೂ ಹೆಚ್ಚಿಗೆ ಜನ ಹೊಸ ಸದಸ್ಯರು ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶ ಮಾಡಿಕೊಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) :- ಮಾನ್ಯ ಅಧ್ಯಕ್ಷರೇ, ತಾವು ಸ್ವಲ್ಪ ಯೋಚನೆ ಮಾಡಿ ನೋಡಬೇಕು. ಏಕೆಂದರೆ ವಿವಿಧ ವಿಷಯಗಳ ಬಗ್ಗೆ ಚರ್ಚೆ ಮಾಡಲು ಸಾಕಷ್ಟು ಸಮಯವನ್ನು ಕೊಟ್ಟಿದ್ದೀರಿ. ಆದರೆ ಕಾರಣಾಂತರದಿಂದ ಅಂದರೆ ಆಲಮಟ್ಟಿ ವಿಷಯ ಬಂದಾಗ, ರಾಜ್ಯದ ವಿದ್ಯುಚ್ಛಕ್ತಿ ಬಗ್ಗೆ, ಗ್ರಾಮಾಭಿವೃದ್ಧಿ ವಿಷಯದ ಬಗ್ಗೆ ಹೀಗೆ ಬೇರೆ ಬೇರೆ ವಿಷಯಗಳ ಬಗ್ಗೆ ಸ್ವಲ್ಪ ಸಮಯವೂ ಹೋಯಿತು. ಆದರೆ ಇದೂ ಸಹ ಮಹತ್ವದ ವಿಷಯವೇ ಆಗಿದೆ. ಹೀಗೆ ಯಾವುದಾದರೂ ಒಂದು ರೂಪದಲ್ಲಿ ಮಹತ್ವದ ವಿಷಯಗಳು ಚರ್ಚೆಗೆ ಬರುತ್ತವೆ.

ಆದ್ದರಿಂದ ತಾವು ಮನಸ್ಸು ಮಾಡಿ ಇನ್ನೂ ಒಂದು ದಿವಸ ಹೆಚ್ಚಿಗೆ ಚರ್ಚೆಗೆ ಅವಕಾಶ ಮಾಡಿಕೊಡಿ. ಏಕೆಂದರೆ 26 ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕಾಗಿದೆ.

ಅಧ್ಯಕ್ಷರು :- ಒಂದು ದಿವಸ ಹೆಚ್ಚಿಗೆ ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವ ಬಗ್ಗೆ ನಂತರ ಚರ್ಚೆ ಮಾಡೋಣ. ಈಗ ಶ್ರೀ ಚಿಮ್ಮನಕಟ್ಟಿ ಯವರು ಬೇಡಿಕೆ ಮೇಲೆ ಚರ್ಚೆ ಪ್ರಾರಂಭ ಮಾಡಲಿ.

(4) ವಿತ್ತೀಯ ಕಾರ್ಯ ಕಲಾಪಗಳು

1996-97 ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ :- (ಮುಂದುವರಿದುದು)

+ **ಶ್ರೀ ಬಾಳಪ್ಪ ಭೀಮಪ್ಪ ಚಿಮ್ಮನಕಟ್ಟಿ (ಬಾದಾಮಿ)** :- ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಸದನದ ಮುಂದೆ 19 ಬೇಡಿಕೆಗಳನ್ನು ಸರ್ಕಾರದವರು ಮಂಡಿಸಿದ್ದಾರೆ. ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಬಹುಶಃ ಎಲ್ಲಾ 19 ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಸಾಧ್ಯವಾಗದೇ ಇದ್ದರೂ ಕೂಡ ಕೆಲವು ಬೇಡಿಕೆಗಳ ಮೇಲೆ ಮಾತನಾಡಿ ಇನ್ನುಳಿದಿರತಕ್ಕಂಥ ಸಮಸ್ಯೆಯನ್ನು ನಮ್ಮ ಶಾಸಕ ಸಹೋದರರಿಗೆ ಬಿಟ್ಟುಕೊಡುವುದು ಸೂಕ್ತವೆಂದು ತಿಳಿದುಕೊಂಡಿದ್ದೇನೆ. ಇವತ್ತು ಬಹಳ ಜನ ಹಿರಿಯ ಸದಸ್ಯರು ಬೇರೆ ಬೇರೆ ಬೇಡಿಕೆಗಳ ಮೇಲೆ ಅನೇಕ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಅದರಲ್ಲಿ ನಾನು ವಿಶೇಷವಾಗಿ ಈವತ್ತು ಶಿಕ್ಷಣದ ಬಗ್ಗೆ ಮತ್ತು ಸಾರಿಗೆ ಸಂಸ್ಥೆಗಳ ಬಗ್ಗೆ ಕೆಲವು ವಿಚಾರಗಳನ್ನು ಮಾತನಾಡಬೇಕೆಂದು ಹೇಳಿ ತಮ್ಮ ಒಪ್ಪಿಗೆಯನ್ನು ಪಡೆಯುತ್ತಿದ್ದೇನೆ. ಇವತ್ತು ಶಿಕ್ಷಣದ ಬಗ್ಗೆ ಬಹುಶಃ ನಾವೆಲ್ಲರೂ ಕೂಡ ಬಹಳ ಹೆಚ್ಚಿನ ಗಮನಕೊಡಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

(ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸ್ವಾತಂತ್ರ್ಯಪೂರ್ವದಲ್ಲಿ ನಾವು ನಮ್ಮ ದೇಶದಲ್ಲಿರತಕ್ಕಂಥ ಪರಿಸ್ಥಿತಿಯನ್ನು ನೋಡಿದಾಗ, ಮತ್ತು ಇವತ್ತಿನ ಪರಿಸ್ಥಿತಿಯನ್ನು ನೋಡಿದಾಗ ಬಹಳ ಅಜಗಜಾಂತರ ವ್ಯತ್ಯಾಸವನ್ನು ಕಂಡಿದ್ದೇವೆ. ಹಿಂದೆ ಅನೇಕ ವರದಿಗಳು, ಕಮೀಷನ್‌ಗಳು ಸ್ಥಾಪನೆ ಆದರೂ ಸಹ ಸ್ವತಂತ್ರ್ಯ ಸಿಕ್ಕು ಇಷ್ಟು ವರ್ಷಗಳಾದರೂ ಸಹ ಶಿಕ್ಷಣ ಎಷ್ಟು ಬೆಳೆಯಬೇಕಾಗಿತ್ತೋ ಅಷ್ಟು ಬೆಳೆಯುವುದಕ್ಕೆ ಇನ್ನೂ ಕೂಡ ಸಾಧ್ಯವಾಗುತ್ತಿಲ್ಲ. ಅದಕ್ಕೆ ಅನೇಕ ಕಾರಣಗಳಿರಬಹುದು. ಆ ಕಾರಣಗಳನ್ನು ವಿವರವಾಗಿ ಹೇಳವುದಕ್ಕೆ ವೇಳೆಯ ಅಭಾವವಿರುವುದರಿಂದ ಕೆಲವೊಂದನ್ನು ಮಾತ್ರ ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣದ ಬಗ್ಗೆ ಚಿಂತನೆಯನ್ನು ಅನೇಕ ಮುಖಂಡರುಗಳು ಮಾಡಿದ್ದಾರೆ. ಹಂಟ್ಸ್ ಕಮೀಷನ್‌ರವರು 1982 ರಲ್ಲಿ ಆಧುನಿಕ ಶಿಕ್ಷಣದ ಬಗ್ಗೆ ರೂಪರೇಷೆಗಳನ್ನು ಮಾಡಿದ್ದರು. ಮತ್ತು ಎರಡನೇ ಬಾರಿ ರೈಲ್ವೆ ಕಮೀಷನ್ 1902 ರಲ್ಲಿ